ಅಸಲು ದಾವೆ ನಂ.ಃ67/2018
ಪಿಡಬ್ಲ್ಯೂ - 1

ದಿನಾಂಕ 02-12-2019 ರಂದು ಸಾಕ್ಷಿಗೆ ಕರೆಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಬಿ.ಎಸ್.ಕೆ ವಕೀಲರಿಂದ.**

ನನ್ನ ಮುಖ್ಯ ವಿಚಾರಣೆಯ ಶಪಥ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ. ಅದನ್ನು ಓದಿ ತಿಳಿದುಕೊಂಡು ನೋಡಿ ಸಹಿ ಮಾಡಿರುತ್ತೇನೆ.

ನಾನು ನ್ಯಾಯಾಲಯಕ್ಕೆ ಸಲ್ಲಿಸಿದ ದಾಖಲೆಗಳನ್ನು ನೋಡುತ್ತಿದ್ದು ಅವುಗಳಲ್ಲಿ 1 ಕಬ್ಜಾ ರಹಿತ ಖರೀದಿ ಕರಾರು ಪತ್ರವಿದ್ದು ಅದನ್ನು ನಿಪಿ-1 ಎಂದು, ಕಾನೂನು ಬದ್ದ ನೋಟಿಸಿನ ಪ್ರತಿಯನ್ನು ನಿಪಿ-2 ಎಂದು, 1 ಅಂಚೆ ರಶೀದಿಯನ್ನು ನಿಪಿ-3 ಎಂದು, 1 ಅಂಚೆ ಸ್ವೀಕೃತಿಯನ್ನು ನಿಪಿ-4 ಎಂದು, 1 ಪಹಣಿ ಪತ್ರಿಕೆಯಿದ್ದು ಅದನ್ನು ನಿಪಿ-5 ಎಂದು ಗುರುತಿಸಲಾಯಿತು.

ನಿಪಿ-1 ರ ಮೇಲೆ ನಾನು ಮತ್ತು ಪ್ರತಿವಾದಿ ಸಹಿ ಮಾಡಿದ್ದೇವೆ. ಪ್ರತಿವಾದಿಯ ಹೆಂಡತಿ ಮತ್ತು ಒಬ್ಬ ಈರಪ್ಪ ನಿಪಿ-1 ರ ಮೇಲೆ ಹೆಬ್ಬೆಟ್ಟಿನ ಸಹಿ ಮಾಡಿದ್ದಾರೆ ಮತ್ತು ಒಬ್ಬ ಜಗನ್ನಾಥರಡ್ಡಿ ಸಹಿ ಮಾಡಿದ್ದಾನೆ. ನಿಪಿ-1 ರ ಮೇಲೆ ದಸ್ತಾವೆಜು ಬರಹಗಾರ ಸಾಹೇಬಗೌಡ ಕೂಡ ಸಹಿ ಮಾಡಿದ್ದಾರೆ. ದಾವೆಯನ್ನು ಡಿಕ್ರಿ ಮಾಡಬೇಕೆಂದು ಪ್ರಾರ್ಥನೆ.

**ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ಬಿ.ಬಿ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ಸಾಕ್ಷಿದಾರರು ಹೇಳಿದಂತೆ ನನ್ನ ಉಕ್ತ ಲೇಖನಕ್ಕೆ ಕಂಪ್ಯೂಟರ್ ನಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ. ಸರಿ ಇರುತ್ತದೆ**

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ